

بسم اللهِ الرّحمٰن الرّحيم

# ವಪ್ರವಾದಿ ಚರಿತ್ರೆ – ಪೈಗಂಬರ್(ಸ)ರ ಕಾಲದ ವಿವಿಧ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **14–02–2025** ರಂದು ನೀಡಿದ **ಜುಮುಅ ಖುತ್**ಬದ **ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔
أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔
اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔
اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಖೈಬರ್ ಯುದ್ಧದ ಬಗ್ಗೆ ಪ್ರಸ್ತಾಪಿಸಲಾಗುತ್ತಿತ್ತು. ಈಗ ನಾನು ಖೈಬರ್‌ನ ಎರಡನೇ ಕೋಟೆಯನ್ನು ಜಯಿಸಿದ ಬಗ್ಗೆ ಪ್ರಸ್ತಾಪಿಸುತ್ತೇನೆ. ಈ ಎರಡನೇ ಕೋಟೆಯನ್ನು **ಸುಅ್‌ಬ್ ಬಿನ್ ಮುಆಧ್** ಎಂದು ಕರೆಯಲಾಗುತ್ತದೆ. ಈ ಕೋಟೆಯಲ್ಲಿ ಖೈಬರಿನ ಇತರ ಎಲ್ಲ ಕೋಟೆಗಳಿಗಿಂತ ಹೆಚ್ಚು ಆಹಾರ, ಜಾನುವಾರುಗಳು ಮತ್ತು ಇತರ ಸಾಮಗ್ರಿಗಳು ಇದ್ದುವು, ಇದರಲ್ಲಿ ಐನೂರು ಯೋಧರು ಇದ್ದರು. ಮುಸ್ಲಿಮರು ಈ ಕೋಟೆಯನ್ನು ಮುತ್ತಿಗೆ ಹಾಕಿದರು, ಆದರೆ ಯಶಸ್ವಿ ಲಭಿಸಲಿಲ್ಲ. ಸಹಾಬಿಯರು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಬಂದು ಸಾಕಷ್ಟು ಹಸಿದಿರುವುದಾಗಿ ಹೇಳಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ನನ್ನ ಜೀವ ಯಾರ ಕೈಯಲ್ಲಿದೆಯೋ ಆ ಅಲ್ಲಾಹನ ಆಣೆ! ನಿಮ್ಮನ್ನು ಬಲಿಷ್ಠಗೊಳಿಸಲು ನನ್ನ ಬಳಿ ಏನೂ ಇಲ್ಲ. ಅನಂತರ ಹಝ್ರತ್ ಪೈಗಂಬರ್(ಸ) ಹೀಗೆ ಪ್ರಾರ್ಥಿಸಿದನು: ಹೇ ಅಲ್ಲಾಹ್, ಆಹಾರ ಮತ್ತು ಕೊಬ್ಬಿನಿಂದ ತುಂಬಿದವರ ಮೇಲೆ ನಮಗೆ ವಿಜಯವನ್ನು ನೀಡು. ಅನಂತರ, ಕೆಲವು ಸಹಾಬಿಯರ ಮತ್ತು ಯಹೂದಿಗಳ ನಡುವೆ ಮಲ್ಲ ಯುದ್ಧ ನಡೆಯಿತು, ಅದರಲ್ಲಿ ಸಹಾಬಿಯರೊಬ್ಬರು ಒಬ್ಬ ಯಹೂದ್ಯನ ತಲೆಗೆ ಶಕ್ತವಾಗಿ ಹೊಡೆದರು ಮತ್ತು ಕೋಮಿನ ಮಹಿಮೆಯ ಘೋಷಣೆ ಕೂಗಿದರು. ಆಗ ಅವರ ಜಿಹಾದ್ ವ್ಯರ್ಥವಾಯಿತು ಎಂದು ಸಹಾಬಿಯರು ಹೇಳಿದರು. ಅಂದರೆ ಕೋಮಿನ ಘೋಷಣೆಯನ್ನು ಕೂಗುವ ಮೂಲಕ ಅವರು ಹೆಮ್ಮೆಪಟ್ಟದ್ದು ಸರಿಯಲ್ಲ ಎಂದು ಹೇಳಿದರು. ಈ ವಿಷಯವು ಹಝ್ರತ್ ಪೈಗಂಬರ್(ಸ)ರಿಗೆ ಮುಟ್ಟಿದಾಗ ಅವರು ಹೇಳಿದರು, "ಪರವಾಗಿಲ್ಲ! ಅವರಿಗೆ ಪ್ರತಿಫಲ ಲಭಿಸುವುದು ಮತ್ತು ಅವರನ್ನು ಪ್ರಶಂಸಿಸಲಾಗುವುದು. ಅಂದರೆ, ಅಂತಹ ಸಂದರ್ಭದಲ್ಲಿ ಯಾರಾದರೂ ಹಾಗೆ ಹೇಳಿದರೆ, ಅದರಲ್ಲಿ ತಪ್ಪಿಲ್ಲ.

ಹಝ್ರತ್ ಮುಹಮ್ಮದ್ ಬಿನ್ ಮಸ್ಲಮ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಬಿಲ್ಲುಗಾರಿಕೆ ಮಾಡುತ್ತಿದ್ದರು ಮತ್ತು ಅವರ ಒಂದು ನಿಶಾನೆ ಕೂಡ ಗುರಿ ತಪ್ಪುತ್ತಿರಲಿಲ್ಲ ಮತ್ತು ಅವರು ನನ್ನನ್ನು ನೋಡಿ ಮುಗುಳ್ನಗುತ್ತಿದ್ದರು. ಹಝ್ರತ್ ಹಬ್ಬಾಬ್ ಬಿನ್ ಮುಂಧಿರ್(ರ) ತನ್ನ ಸೈನಿಕರೊಂದಿಗೆ ಕೋಟೆಯನ್ನು ಪ್ರವೇಶಿಸಿ ಶಕ್ತವಾದ ಹೋರಾಟ ನಡೆಸಿದರು ಮತ್ತು ಕೊನೆಗೆ ಅದನ್ನು ಮತ್ತು ಅದರೊಳಗೆ ಇದ್ದ ಧಾನ್ಯಗಳನ್ನು ವಶಪಡಿಸಿಕೊಂಡರು. ಹಝ್ರತ್ ಪೈಗಂಬರ್(ಸ) ಹೇಳಿದರು: ನೀವೂ ತಿನ್ನಿರಿ ಮತ್ತು ನಿಮ್ಮ ಜಾನುವಾರುಗಳಿಗೂ ನೀಡಿರಿ, ಆದರೆ ನಿಮ್ಮೊಂದಿಗೆ ಏನನ್ನೂ ಕೊಂಡೊಯ್ಯಬೇಡಿರಿ".

ಅದಾದ ನಂತರ ಮೂರನೇ ಕೋಟೆಯಾದ **ಝುಬೇರ್** ಕೋಟೆಯನ್ನು ಜಯಿಸಿದ ಪ್ರಸ್ತಾಪವಿದೆ. ಯಹೂದಿಗಳು ಸುಅ್‌ಬ್ ಮತ್ತು ನಾಯಿಮ್ ಕೋಟೆಗಳನ್ನು ತೊರೆದು ಝುಬೈರ್ ಕೋಟೆಗೆ ಓಡಿಹೋದಾಗ, ಹಝ್ರತ್ ಪೈಗಂಬರ್(ಸ) ಅದಕ್ಕೆ ಮುತ್ತಿಗೆ ಹಾಕಿದರು. ಈ ಕೋಟೆಯು ಪರ್ವತದ ತುದಿಯಲ್ಲಿತ್ತು. ಮೂರು ದಿನಗಳ ಕಾಲ ಈ ಕೋಟೆಯನ್ನು ಮುತ್ತಿಗೆ ಹಾಕಿದರೂ ಯಶಸ್ವಿಯಾಗಲಿಲ್ಲ. ಅಭಯ ನೀಡಲಾಗುವುದು ಎಂಬ ನಿಬಂಧನೆಯ ಮೇಲೆ ಒಬ್ಬ ಯಹೂದ್ಯನು ಹೇಳಿದನು: ನೀವು ಅವರನ್ನು ಈ ರೀತಿಯಲ್ಲಿ ಒಂದು ತಿಂಗಳಷ್ಟು ಮುತ್ತಿಗೆ ಹಾಕಿದರೆ ಕೂಡ ಯಾವುದೇ ಪ್ರಯೋಜನವಾಗದು. ಏಕೆಂದರೆ ಅವರ ನೆಲದ ಕೆಳಗೆ ಸುರಂಗಗಳು ಇವೆ. ಅವರು ರಾತ್ರಿ ಸಮಯದಲ್ಲಿ ಹೊರಬರುತ್ತಾರೆ ಮತ್ತು ನೀರನ್ನು ತೆಗೆದು ತಮ್ಮ ಕೋಟೆಗಳಿಗೆ ಮರಳಿ ಹೋಗುತ್ತಾರೆ. ನೀವು ಅವರ ನೀರಿನ ಮಾರ್ಗವನ್ನು ಕಡಿದು ಹಾಕಿದರೆ ಮಾತ್ರ ಅವರು ಶರಣಾಗುವರು. ಹೀಗೆ ಹಝ್ರತ್ ಪೈಗಂಬರ್(ಸ) ಅವರ ನೀರಿನ ಮಾರ್ಗವನ್ನು ತಡೆದು ಹಾಕಿದರು. ನೀರಿನ ಮಾರ್ಗ ಕಡಿಯಲ್ಪಟ್ಟಾಗ ಅವರು ಹೊರಬಂದರು. ಭೀಕರ ಹೋರಾಟ ಪ್ರಾರಂಭವಾಯಿತು. ಆ ದಿನ ಮುಸ್ಲಿಮರ ಕೆಲವು ಸಹಾಬಿಯರು ಹುತಾತ್ಮರಾದರು ಮತ್ತು ಹತ್ತು ಯಹೂದಿಯರು ಕೊಲ್ಲಲ್ಪಟ್ಟರು. ಕೊನೆಗೆ ಹಝ್ರತ್ ಪೈಗಂಬರ್(ಸ) ಜಯ ಸಾಧಿಸಿದರು. ಅನಂತರ ಹಝ್ರತ್ ಪೈಗಂಬರ್(ಸ) **ಶಿಖ್**‌ನ ಕೋಟೆಗಳ ಕಡೆಗೆ ತೆರಳಿದರು. ಯಹೂದಿ ಮುಖ್ಯಸ್ಥ ಸಲಾಂ ಬಿನ್ ಮುಶ್‌ಕಮ್‌ನ ಹತ್ಯೆಯ ಉಲ್ಲೇಖವೂ ಇದೆ. ಆತನು ರೋಗಿಯಾಗಿದ್ದನು. ಆದ್ದರಿಂದ ಯುದ್ಧದಲ್ಲಿ ಭಾಗವಹಿಸುತ್ತಿರಲಿಲ್ಲ ಎಂದು ಚರಿತ್ರೆಯಲ್ಲಿ ಉಲ್ಲೇಖಿಸಲಾಗಿದೆ. ಬೇರೆಡೆಗೆ ಹೋಗುವಂತೆ ಆತನ ಸಹಚರರು ಆತನಿಗೆ ಸಲಹೆ ನೀಡಿದ್ದರು. ಆದರೆ ಆತನು ಈ ಸಲಹೆಗೆ ಕಿವಿಗೊಡಲಿಲ್ಲ. ಕೊನೆಗೆ ಆತನು ಮುಸ್ಲಿಮರಿಂದ ಕೊಲ್ಲಲ್ಪಟ್ಟನು.

(ಹುಝೂರ್ ಹೇಳಿದರು:) ಆತನ ಅನಾರೋಗ್ಯದ ಸಂಗತಿ ಮತ್ತು ಆತನು ಯುದ್ಧ ಮಾಡಿರಲಿಲ್ಲವೆಂಬುದು ಸತ್ಯವೆಂದಾದರೂ ಕೂಡ ಆತನ ಹತ್ಯೆಯು ಆಕ್ಷೇಪಾರ್ಹವಲ್ಲ. ಏಕೆಂದರೆ ತನ್ನ ಸೈನ್ಯವನ್ನು ಯುದ್ಧಕ್ಕೆ ಕಳುಹಿಸಲು ಸಿದ್ಧಪಡಿಸಿದ್ದು ಆತನೇ ಆಗಿದ್ದನು ಮತ್ತು ಆತನು ಸೈನ್ಯದ ಮೇಲ್ನೋಟ ಕೂಡ ವಹಿಸುತ್ತಿದ್ದನು. ಈ ನಡುವೆ ಯುದ್ಧದ ಪರಿಸ್ಥಿತಿಯಲ್ಲಿ ಸಹಾಬಿಯರೊಬ್ಬರು ಆತನನ್ನು ವಧಿಸಿದರು. ಸೇನಾಧಿಪತಿಗೆ ಹೆಚ್ಚಿನ ಪ್ರಾಮುಖ್ಯತೆ ಇರುತ್ತದೆ ಮತ್ತು ನಾಯಕನು ಮೃತಪಟ್ಟರೆ ಸೇನೆಯು ಧೈರ್ಯವನ್ನು ಕಳೆದುಕೊಳ್ಳುತ್ತದೆ. ಹೀಗಾಗಿ ಆತನನ್ನು ವಧಿಸಿದ್ದು ಆಕ್ಷೇಪಾರ್ಹವಲ್ಲ.

ಶಿಖ್ ಕೋಟೆಯು ಎರಡು ಕೋಟೆಗಳ ಸಂಯೋಜನೆಯಾಗಿತ್ತು. ಮೊದಲಿಗೆ ಹಝ್ರತ್ ಪೈಗಂಬರ್(ಸ) **ಉಬಯ್** ಕೋಟೆಯ ಕಡೆಗೆ ಹೋದರು. ಒಂದು ಪರ್ವತದಲ್ಲಿ ನಿಂತುಕೊಂಡು ಹಝ್ರತ್ ಪೈಗಂಬರ್(ಸ) ಕೋಟೆಯವರೊಡನೆ ಹೋರಾಡಿದರು. ಆರಂಭದಲ್ಲಿ ಮಲ್ಲ ಯುದ್ಧ ನಡೆಯಿತು. ಹಝ್ರತ್ ಹಬ್ಬಾಬ್ ಬಿನ್ ಮುಂಧಿರ್(ರ) ಮತ್ತು ಜಹಶ್ ಕುಟುಂಬದಿಂದ ಒಬ್ಬ ವ್ಯಕ್ತಿಯ ನಡುವೆ ಮಲ್ಲ ಯುದ್ಧ ನಡೆಯಿತು. ಅದೇ ರೀತಿಯಲ್ಲಿ ಅಬು ದುಜಾನ ಮುಸ್ಲಿಮರ ಕಡೆಯಿಂದ ಮಲ್ಲ ಯುದ್ಧ ನಡೆಸಿದರು. ಮಲ್ಲ ಯುದ್ಧದಲ್ಲಿ ಮುಸ್ಲಿಮರು ಜಯಿಸಿದಾಗ ಯಹೂದಿಯರು ಮಲ್ಲ ಯುದ್ಧದಿಂದ ಹಿಂದೆ ಸರಿದರು. ಆಗ ಮುಸ್ಲಿಮರು ಮುಂದೆ ಬಂದು ಕೋಟೆಯ ಮೇಲೆ ದಾಳಿ ಮಾಡಿದರು. ಯಹೂದಿಯರು ಮುಸ್ಲಿಮರ ಮೇಲೆ ಶಕ್ತವಾಗಿ ಬಿಲ್ಲುಗಾರಿಕೆ ನಡೆಸಿದರು. ಮುಸ್ಲಿಮರು ಅದಕ್ಕೆ ಪ್ರತಿಯಾಗಿ ಬಿಲ್ಲುಗಾರಿಕೆ ನಡೆಸಿದರು. ಆದರೆ ಯಹೂದಿಯರು ಮೇಲಿನ ಗೋಪುರಗಳಿಂದ ಮುಸ್ಲಿಮರ ಮೇಲೆ ಬಾಣಗಳನ್ನು ಹಾರಿಸುತ್ತಿದ್ದ ಕಾರಣದಿಂದ ಮುಸ್ಲಿಮರಿಗೆ ಈ ದಾಳಿಯಿಂದ ಹಾನಿಯಾಯಿತು. ಹಝ್ರತ್ ಪೈಗಂಬರ್(ಸ) ಡೇರೆ ಹಾಕಿದ್ದ ಜಾಗವನ್ನು ವಿಶೇಷವಾಗಿ ದಾಳಿಗೆ ಗುರಿಪಡಿಸಲು ಯಹೂದಿಯರು ಉದ್ದೇಶಿಸಿದ್ದರು ಎಂದು ತೋರುತ್ತದೆ. ಹಝ್ರತ್ ಪೈಗಂಬರ್(ಸ) ಸಹಾಬಿಯರ ಜೊತೆಗೆ ಇದ್ದಾಗ ಬಾಣವೊಂದು ಅವರ ಬಟ್ಟೆಗೆ ತಗುಲಿತು. ಆ ಬಾಣದಿಂದ ಹಝ್ರತ್ ಪೈಗಂಬರ್(ಸ) ಗಾಯಗೊಂಡರು ಎಂದು ಒಂದು ವರದಿಯಲ್ಲಿ ಬಂದಿದೆ. ಆಗ ಅವರು ಒಂದು ಮುಷ್ಟಿಯಷ್ಟು ಕಲ್ಲುಗಳನ್ನು ತೆಗೆದು ಅವರ ಮೇಲೆ ಎಸೆದರು. ಇದರಿಂದ ಅವರ ಕೋಟೆ ಕಂಪಿಸಿತು. ಕೊನೆಗೆ ಮುಸ್ಲಿಮರು ಯಹೂದಿಯರನ್ನು ಸೆರೆಹಿಡಿದರು.

ಅನಂತರ ಇನ್ನೂ ಮೂರು ಕೋಟೆಗಳನ್ನು ಮುಸ್ಲಿಮರು ಮುತ್ತಿಗೆ ಹಾಕಿ ವಶಪಡಿಸಿಕೊಂಡರು. ಈ ಕೋಟೆಗಳಲ್ಲಿ ಖಮೂಸ್ ಸಾಕಷ್ಟು ಗಟ್ಟಿ ಕೋಟೆಯಾಗಿತ್ತು. ಹಝ್ರತ್ ಪೈಗಂಬರ್(ಸ) ಹದಿನಾಲ್ಕು ದಿನಗಳ ಕಾಲ ಅದಕ್ಕೆ ಮುತ್ತಿಗೆ ಹಾಕಿದರು. ಅನಂತರ ಫಿರಂಗಿಯ ಸಹಾಯದಿಂದ ಯಹೂದಿಯರ ಮೇಲೆ ಕಲ್ಲುಗಳನ್ನು ಎಸೆಯಲು ತೀರ್ಮಾನಿಸಲಾಯಿತು. ಹೀಗೆ ಯಹೂದಿಯರಿಗೆ ತಮ್ಮ ಸಾವಿನ ಬಗ್ಗೆ ಖಚಿತವಾದಾಗ, ಅವರು ಹಝ್ರತ್ ಪೈಗಂಬರ್(ಸ)ರೊಡನೆ ಮೈತ್ರಿ ಸಂಧಾನ ಮಾಡಲು ಕೋರಿಕೊಂಡರು. ಯಹೂದಿಯರ ಈ ಬೇಡಿಕೆಯ ಮೇರೆಗೆ, ಮುಸ್ಲಿಮರ ಜೊತೆಗೆ ಯಹೂದಿಯರು ಆಯುಧಗಳನ್ನು ಕೆಳಗೆ ಹಾಕುವುದಾಗಿ ಒಪ್ಪಂದ ಮಾಡಿ ಕೊಳ್ಳಲಾಯಿತು. ಈ ಒಪ್ಪಂದದಲ್ಲಿ, ಹಝ್ರತ್ ಪೈಗಂಬರ್(ಸ) ಯಹೂದಿಯರೊಡನೆ ಬಹಳ ಸೌಮ್ಯವಾಗಿ ವರ್ತಿಸಿದರು. ಸಹೀಹ್ ಬುಖಾರಿಯ ವರದಿಯ ಪ್ರಕಾರ, ಕೃಷಿ ನಡೆಸಲು ಮತ್ತು ಕೆಲಸ ಮಾಡಲು ಹಝ್ರತ್ ಪೈಗಂಬರ್(ಸ) ಯಹೂದಿಯರಿಗೆ ಖೈಬರನ್ನು ಕೊಟ್ಟರು. ಅಲ್ಲಿಯ ಉತ್ಪಾದನೆಯ ಅರ್ಧ ಅವರಿಗೆ ಎಂದು ತೀರ್ಮಾನಿಸಲಾಯಿತು. ಖೈಬರ್‌ನಲ್ಲಿ ಹದಿನೇಳು ಸಹಾಬಿಯರು ಶಹೀದ್ ಆದರು.

ಚರಿತ್ರೆಯ ಗ್ರಂಥಗಳಲ್ಲಿ ಹೀಗೆ ಉಲ್ಲೇಖಿಸಲಾಗಿದೆ: ಖೈಬರನ್ನು ವಶಪಡಿಸಿಕೊಂಡ ನಂತರ, ಮುಸ್ಲಿಮರು ಮತ್ತು ಯಹೂದಿಯರ ನಡುವೆ ಒಪ್ಪಂದವಾದಾಗ, ಜನರು ಕನಾನ ಮತ್ತು ಆತನ ಸಹೋದರ ರಬೀಅ್‌ನನ್ನು ಹಝ್ರತ್ ಪೈಗಂಬರ್(ಸ)ರ ಬಳಿಗೆ ತಂದರು. ಕನಾನ ಇಡೀ ಖೈಬರಿನ ಸರದಾರನಾಗಿದ್ದನು. ಮತ್ತು ಹಝ್ರತ್ ಸಫಿಯ(ರ)ರ ಪತಿಯಾಗಿದ್ದನು. ರಬೀಅ್ ಆತನ ಚಿಕ್ಕಪ್ಪನ ಪುತ್ರನಾಗಿದ್ದನು. ಬನೂ ನಧೀರ್ ಗೋತ್ರದ ಸರದಾರ ಹುಯ್ಯ್ ಬಿನ್ ಅಖ್ತಬ್‌ನ ಖಜಾನೆ ಕನಾನನ ಬಳಿಯಿತ್ತು. ಅದರಲ್ಲಿ ಚಿನ್ನ ಮತ್ತು ಬೆಳ್ಳಿಯ ಆಭರಣಗಳು ಸಹ ಇದ್ದವು. ಹಝ್ರತ್ ಪೈಗಂಬರ್(ಸ) ಆ ನಿಧಿಯ ಬಗ್ಗೆ ಇಬ್ಬರನ್ನೂ ಕೇಳಿದರು, ಆದರೆ ಅವರು ಹೇಳಲಿಲ್ಲ. ಹಝ್ರತ್ ಪೈಗಂಬರ್(ಸ) ಹೇಳಿದರು: ನೀವು ನನ್ನಿಂದ ಏನನ್ನಾದರೂ ಮರೆಮಾಚಿದರೆ ಮತ್ತು ನಂತರ ಅದು ಬಯಲಾದರೆ ಅಲ್ಲಾಹನು ಮತ್ತು ಅವನ ರಸೂಲ್ ನಿಮ್ಮ ಬಗ್ಗೆ ಯಾವುದೇ ಜವಾಬ್ದಾರಿಯನ್ನು ಹೊಂದಿರುವುದಿಲ್ಲ. ಚರಿತ್ರೆಯ ಗ್ರಂಥಗಳ ಪ್ರಕಾರ, ಹಝ್ರತ್ ಪೈಗಂಬರ್(ಸ) ಕೆಲವು ಚಿಹ್ನೆಗಳನ್ನು ಹೇಳಿ ಸಹಾಬಿಯೊಬ್ಬರನ್ನು ಕಳುಹಿಸಿದರು. ಆ ಸಹಾಬಿ ಅ ಖಜಾನೆಯನ್ನು ತೆಗೆದು ಕೊಂಡು ಬಂದರು. ಅದರ ಮೌಲ್ಯ ಹತ್ತು ಸಾವಿರ ದಿನಾರ್ ಎಂದು ಗೊತ್ತುಮಾಡಲಾಯಿತು ಹಾಗೂ ಕನಾನ ಮತ್ತು ರಬೀಅ್ ಇಬ್ಬರನ್ನೂ ವಧಿಸಲಾಯಿತು. ಕನಾನನಿಗೆ ಕಿಡಿಗಲ್ಲಿನಿಂದ ಬೆಂಕಿ ಹಚ್ಚಲಾಯಿತು ಎಂದೂ ಕೆಲವು ವರದಿಗಳಲ್ಲಿ ಪ್ರಸ್ತಾಪವಿದೆ.

(ಹುಝೂರ್ ಈ ಘಟನೆಯ ಬೇರೆ ಕೆಲವು ವರದಿಗಳನ್ನು ವಿವರಿಸಿದ ನಂತರ, ಅವುಗಳ ಬಗ್ಗೆ ಒಟ್ಟಾರೆಯಾಗಿ ವಿಶ್ಲೇಷಣೆ ನಡೆಸಿಕೊಂಡು ಈ ವರದಿಗಳು ಸತ್ಯ ಘಟನೆಗೆ ವಿರುದ್ಧವೆಂದೂ ಹಝ್ರತ್ ಪೈಗಂಬರ್(ಸ)ರ ಕರುಣೆಗೆ ಎದುರಾಗಿದೆ ಎಂದೂ ಹೇಳಿದರು.) ಹಝ್ರತ್ ಪೈಗಂಬರ್(ಸ)ರಿಗೆ ಹಣ ಮತ್ತು ಸಂಪತ್ತಿನ ದುರಾಸೆಯಿತ್ತು ಎಂದು ಹೇಳಿ ಇಲ್ಲಿಯೂ ಆಕ್ಷೇಪಕರು ಇಸ್ಲಾಂ ಮತ್ತು ಹಝ್ರತ್ ಪೈಗಂಬರ್(ಸ)ರ ವಿರುದ್ಧ ಆಕ್ಷೇಪವೆತ್ತಿರುವರು. ಹಝ್ರತ್ ಪೈಗಂಬರ್(ಸ) ದೌರ್ಜನ್ಯ ನಡೆಯುವುದನ್ನು ತಡೆಯುತ್ತಿರಲಿಲ್ಲ ಎಂದೂ ಸಾಬೀತುಪಡಿಸಲು ಅವರು ಶ್ರಮಿಸಿದರು. ಆದರೆ ಹಝ್ರತ್ ಪೈಗಂಬರ್(ಸ)ರ ಜೀವನವು ತೆರೆದ ಪುಸ್ತಕದಂತಿದೆ. ಚಿಕ್ಕ ಮಕ್ಕಳನ್ನು ಹಾಗೂ ಮಹಿಳೆಯರನ್ನು ಕೊಲ್ಲಬಾರದು ಎಂದೂ ಒಂದು ಮರವನ್ನು ಕೂಡ ವಿನಾ ಕಾರಣ ಕತ್ತರಿಸಬಾರದು ಎಂದೂ ಹಝ್ರತ್ ಪೈಗಂಬರ್(ಸ) ಯುದ್ಧಕ್ಕೆ ಮುಂಚಿತವಾಗಿ ನಿರ್ದೇಶನ ಕೊಡುತ್ತಿದ್ದರು. ಪ್ರಾಣಿಗಳ ನೋವನ್ನು ಕೂಡ ನೋಡಲು ಸಾಧ್ಯವಾಗದವರು ಮನುಷ್ಯರ ಮೇಲೆ ಹೇಗೆ ದೌರ್ಜನ್ಯ ಮಾಡುವರು? ಅದೇ ರೀತಿಯಲ್ಲಿ ಸಂಪತ್ತಿಗಾಗಿ ಯುದ್ಧ ಮಾಡಿದ್ದರು ಎಂದು ಹೇಳುವುದು ಕೂಡ ನಿರಾಧಾರವಾದ ಆಕ್ಷೇಪಣೆಯಾಗಿದೆ.

ಸಂಪತ್ತಿನ ಲಾಲಸೆಯಿಂದ ಯುದ್ಧಕ್ಕೆ ಹೊರಡಲು ಬಯಸುವವರು ನಮ್ಮೊಂದಿಗೆ ಬರಬಾರದು ಎಂದು ಹೊರಡುವುದಕ್ಕೆ ಮೊದಲು ಘೋಷಿಸಿದ್ದು ಖೈಬರ್ ಯುದ್ಧದ ವೇಳೆಯಾಗಿತ್ತು. ಹಝ್ರತ್ ಪೈಗಂಬರ್(ಸ)ರ ಮಾದರಿ ಹೀಗೆ ಆಗಿರುವಾಗ ಅಂಥವರ ಕುರಿತು ಇಂತಹ ಯಾವುದಾದರೂ ವರದಿ ಮುಂದೆ ಬಂದರೆ, ನ್ಯಾಯಪರತೆ ಆವಶ್ಯಪಡುವುದೇನೆಂದರೆ,

ಅದನ್ನು ಪರಿಶೀಲಿಸಬೇಕು, ಅದನ್ನು ಇತರ ವರದಿಗಳೊಂದಿಗೆ ತಾಳೆ ಹಾಕಿ ನೋಡಬೇಕು ಮತ್ತು ಅದರ ಸರಿಯಾದ ಅರ್ಥವನ್ನು ಮನವರಿಕೆ ಮಾಡಲು ಪ್ರಯತ್ನಿಸಬೇಕು ಎಂದಾಗಿದೆ. ಹಝ್ರತ್ ಪೈಗಂಬರ್[ಸ] ನೀತಿ ಮತ್ತು ನ್ಯಾಯದ ಸಾಕಾರರೂಪ ಮತ್ತು ಧ್ವಜವಾಹಕರಾಗಿದ್ದರು. ಹಝ್ರತ್ ಪೈಗಂಬರ್[ಸ]ರ ಮೇಲೆ ಇಂತಹ ಕೃತ್ಯಗಳನ್ನು  ಆರೋಪಿಸುವುದು ನ್ಯಾಯವಲ್ಲ.

(ಹುಝೂರ್ ಒರಿಯನ್ಟಲಿಸ್ಟರ ಆಕ್ಷೇಪಗಳನ್ನು ವರದಿಗಳ ಆಂತರಿಕ ಪುರಾವೆಗಳನ್ನು ಮುಂದಿರಿಸಿಕೊಂಡು ವಿಶ್ಲೇಷಿಸಿದರು ಮತ್ತು ಸತ್ಯಘಟನೆಗೆ ವಿರುದ್ಧವಾದ ವರದಿಗಳನ್ನು ತಪ್ಪೆಂದು ಸಾಬೀತುಪಡಿಸಿದರು.) ಈ ವರದಿಗಳನ್ನು ಅಲ್ಲಾಮಾ ಶಿಬ್ಲಿ ನುಮಾನಿ ಪೂರ್ಣವಾಗಿಯೂ ತಪ್ಪೆಂದು ಬಣ್ಣಿಸಿದ್ದಾರೆ. ಅಂತೆಯೇ, ಕನಾನನನ್ನು ವಧಿಸಲು ಕಾರಣವೆಂದರೆ, ಆತನು ಮಹ್ಮೂದ್ ಬಿನ್ ಮಸ್ಲಮರನ್ನು ವಧಿಸಿದ್ದನು ಮತ್ತು  ಹಝ್ರತ್ ಪೈಗಂಬರ್[ಸ]ರ ನಿರ್ದೇಶನದ ಮೇರೆಗೆ ಮುಹಮ್ಮದ್ ಬಿನ್ ಮಸ್ಲಮ ತನ್ನ ಸಹೋದರ ಮಹ್ಮೂದ್‌ರಿಗೆ ಪ್ರತಿಯಾಗಿ ಕನಾನನನ್ನು ವಧಿಸಿದರು.

ಪ್ರಸ್ತುತ ಕಾಲದ ಅಹ್ಮದೀ ಲೇಖಕ ಸಯ್ಯಿದ್ ಬರಕಾತ್ ಅಹ್ಮದ್ ಸಾಹಿಬ್‌ರು ತನ್ನ ಪುಸ್ತಕ "ರಸೂಲೇ ಅಕ್ರಮ್[ಸ] ಮತ್ತು ಯಹೂದೇ ಹಿಜಾಝ್"ನಲ್ಲಿ, ಬರೆಯುತ್ತಾರೆ: ಇಬ್ನು ಇಸ್‌ಹಾಖ್ ಈ ಘಟನೆಯನ್ನು ಯಾವುದೇ ಪುರಾವೆಗಳಿಲ್ಲದೆ ವಿವರಿಸಿದ್ದಾರೆ. ಮೊದಲನೆಯದಾಗಿ, ಶಿಕ್ಷೆ ಮತ್ತು ಅದು ಕೂಡ ಬೆಂಕಿಯಿಂದ ಶಿಕ್ಷಿಸುವುದು ಇಸ್ಲಾಮಿನ ಬೋಧನೆಗೆ ವಿರುದ್ಧವಾಗಿದೆ. ಎರಡನೆಯದಾಗಿ, ಇಡೀ ಖೈಬರ್‌ನ ಸಂಪತ್ತಿನ ವಿತರಣೆಯಲ್ಲಿ ಈ ನಿಧಿಯ ವಿತರಣೆಯ ಬಗ್ಗೆ ಯಾವುದೇ ವರದಿಯಲ್ಲಿ ಉಲ್ಲೇಖವಿಲ್ಲ. ಈ ನಿಧಿಯು ಬೈತುಲ್ ಮಾಲಿಗೆ ಸೇರಿಸಿದ್ದಾಗಿಯೂ ಯಾವುದೇ ವರದಿ ಇಲ್ಲ.

(ಹುಝೂರ್ ಹೇಳಿದರು:) ಸತ್ಯ ಸಂಗತಿ ಇದಾಗಿದೆ. ಘಟನೆಗಳು ಇನ್ನೂ ಇವೆ. ಇಲ್ಲಿ ಇಂತಹ ಘಟನೆಗಳಲ್ಲಿ ಯಹೂದಿ ಮಹಿಳೆಯೊಬ್ಬಳ ಪ್ರಸ್ತಾಪ ಸಹ ಬರುತ್ತದೆ. ಅವಳು ಹಝ್ರತ್ ಪೈಗಂಬರ್[ಸ]ರಿಗೆ ವಿಷವುಣಿಸಲು ಪ್ರಯತ್ನಿಸಿದ್ದಳು ಮತ್ತು ಹಝ್ರತ್ ಪೈಗಂಬರ್[ಸ]ರ ವಿರುದ್ಧ ಸಂಚು ಹಾಕಿದ್ದಳು. ಆದರೆ ಅಲ್ಲಾಹನು ಹಝ್ರತ್ ಪೈಗಂಬರ್[ಸ]ರನ್ನು ಸಂರಕ್ಷಿಸಿದನು. ಅದು ದೀರ್ಘವಾದ ಘಟನೆಯಾಗಿದೆ. ಅದರ ವಿವರಣೆ ಮುಂದಿನ ಬಾರಿ ವಿವರಿಸಲಾಗುವುದು.

(ಕೊನೆಗೆ ಹುಝೂರ್ ಆಸ್ಟ್ರೇಲಿಯಾದ ಸನ್ಮಾನ್ಯ ಮಾಸ್ಟರ್ ಮನ್ಸೂರ್ ಅಹ್ಮದ್ ಸಾಹಿಬ್ ಕಾಹ್‌ಲೋನ್‌ರ ಬಗ್ಗೆ ಪ್ರಸ್ತಾಪಿಸಿದರು ಮತ್ತು ಅವರ ಜನಾಝ ಗ಼ಾಯಿಬ್ ನಿರ್ವಹಿಸುವುದಾಗಿ ಹೇಳಿದರು ಹಾಗೂ ಅವರ ಮಗ಼್ಫಿರತ್ ಮತ್ತು ಉನ್ನತ ಪದವಿಗಾಗಿ ದುಆ ಮಾಡಿದರು.)

*****

اَلْحَمْدُ لِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّئَاتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَا ھَادِیَ لَہٗ ۔ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُ اَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَاْمُرُ بِالْعَدْلِ وَالْاِحْسَانِ وَاِیْتَآءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ۝ اُذْکُرُوا اللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ.


***Friday Sermon delivered by Hadrath Khaleefatul Masih Al Khamis***[atba]

At, ***'Masjid Mubarak'***, *Islamabad, Tilford,* U.K. On 14-02-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email****:* *khutuba.kannada@gmail.com*

**You can find all the Sermons archived at**: www.alislam.org/friday-sermon